**ಸಾಕ್ಷಿಯನ್ನು ದಿಃ21.01.2026 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ಈ ದಾವೆಯನ್ನು ವಾದಿಯು ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿಲ್ಲ.

2. ಈ ದಾವೆಗೆ ಯಾವ ಚಕ್ಕುಬಂದಿ ನೀಡಿದ್ದಾರೆ ಎಂದರೆ, ಪೂರ್ವಕ್ಕೆಃ ಜವರೇಗೌಡರ ಜಮೀನು, ಪಶ್ಚಿಮಕ್ಕೆಃ ಕಾಳಮ್ಮನವರ ಜಮೀನು, ಉತ್ತರಕ್ಕೆಃ ಬೋರೇಗೌಡ ಶಿವೇಗೌಡರ ಜಮೀನು ಹಾಗೂ ದಕ್ಷಿಣಕ್ಕೆಃ ಹಾರಂಗಿ ಕಾಲುವೆ ಎಂದು ನೀಡಿದ್ದಾರೆ.

3. ಪೂರ್ವಕ್ಕೆ ಇರುವ ಜವರೇಗೌಡರ ಜಮೀನು ವಾದಿಯ ಮಾವ ಎಂದರೆ, ಅಲ್ಲಿ ಜವರೇಗೌಡರ ಜಮೀನು ಇಲ್ಲ, ನಾವೇ ಇರುವುದು ಎಂದು ನುಡಿಯುತ್ತಾರೆ. ಜವರೇಗೌಡ ರುಕ್ಮಣಮ್ಮನವರ ಮಾವ ಅಲ್ಲ.

4. ವಾದಿಯ ಗಂಡನ ಹೆಸರು ಮೊಗಣ್ಣೇಗೌಡ. ಮೊಗಣ್ಣೇಗೌಡರ ತಂದೆ ಹೆಸರು ಜವರೇಗೌಡ.

5. ಪೂರ್ವಕ್ಕೆ ಇರುವ ಜವರೇಗೌಡ ಎಂದರೆ ಮೊಗಣ್ಣೇಗೌಡರ ತಂದೆ ಎಂದರೆ, ಅವರು ಸುಳ್ಳು ಹೇಳುತ್ತಿದ್ದಾರೆ, ಅವರ ಜಮೀನು ಇಲ್ಲ. ಅಲ್ಲಿ ಸ.ನಂ.94/12 ಪಿ1 ರಲ್ಲಿ ರುಕ್ಮಿಣಮ್ಮನ 10 ಗುಂಟೆ ಹಾಗೂ ನಮ್ಮ 1 ಎಕರೆ ಜಮೀನು ಇದೆ.

6. ನನ್ನ ಲಿಖಿತ ಹೇಳಿಕೆಯಲ್ಲಿನ ವಿಚಾರಗಳನ್ನು ತಿಳಿದುಕೊಂಡಿದ್ದೇನೆ.

7. ಸ.ನಂ.94/1 ಪಿ1 ರಲ್ಲಿ ಒಟ್ಟು 4 ಎಕರೆ ಇದೆ ಎಂದರೆ, ಅದು 94/11 ಪಿ1 ರಲ್ಲಿ 4 ಎಕರೆ ಇದೆ. ನಿಮ್ಮ ತಕರಾರಿನಲ್ಲಿ 94/1 ಪಿ1 ಎಂದು ಬರೆಸಿದ್ದೀರಾ ಎಂದರೆ, ಬರೆಸಿಲ್ಲ.

8. ಸದರಿ ಜಮೀನು ಲೇಟ್ ಕುಳ್ಳೇಗೌಡರ ಮಗ ತೋಪೇಗೌಡರಿಗೆ ಕ್ರಯಪತ್ರದಡಿ ಬಂದ ಸ್ವತ್ತು ಎಂದು ಬರೆಸಿದ್ದೇವೆ.

9. ತೋಪೇಗೌಡರ ತಮ್ಮಂದಿರು ಸಣ್ಣೇಗೌಡ ಹಾಗೂ ಜವರೇಗೌಡ ಎಂದರೆ ಸರಿ.

10. ಸದರಿ ಸಣ್ಣೇಗೌಡರ ಮಕ್ಕಳು ಬೋರೇಗೌಡ ಹಾಗೂ ಶಿವಣ್ಣೇಗೌಡ ಎಂದರೆ ಸರಿ. ಸದರಿ ಜವರೇಗೌಡರವರೇ ವಾದಿಯ ಮಾವ ಎಂದರೆ ಸರಿ.

11. ನೀವು ನಿಮ್ಮ ತಕರಾರಿನಲ್ಲಿ ಜವರೇಗೌಡರು, ಸಣ್ಣೇಗೌಡರು ತಲಾ 2 ಎಕರೆ ಹಂಚಿಕೆ ಮಾಡಿಕೊಂಡಿದ್ದಾರೆ ಎಂದು ಬರೆಸಿದ್ದೀರಾ ಎಂದರೆ, ಬರೆಸಿದ್ದೇವೆ. ಸಣ್ಣೇಗೌಡರ 2 ಎಕರೆ ಜಮೀನನ್ನು ಅವರ ಮಕ್ಕಳು ಹಂಚಿಕೆ ಮಾಡಿಕೊಂಡಿದ್ದಾರೆ ಎಂದು ಬರೆಸಿದ್ದೇವೆ. ಉಳಿಕೆ 2 ಎಕರೆ ಜವರೇಗೌಡರ ಜಮೀನು ಎಂದು ಬರೆಸಿದ್ದೀರಾ ಎಂದರೆ, ಹೌದು.

12. ಸದರಿ ಜವರೇಗೌಡರು ಮೊಗಣ್ಣೇಗೌಡರ ತಂದೆ ಹಾಗೂ ವಾದಿಯ ಮಾವ ಎಂದರೆ ಸರಿ.

13. 4 ಎಕರೆ ಜಮೀನು ಪೈಕಿ 2 ಎಕರೆ ವಾದಿಯ ಹೆಸರಿಗೆ ಖಾತೆ ಇದೆ ಎಂದರೆ ಸರಿ. ಅವರಿಗೆ ಬರುವ ಮುಂಚೆ 2 ಎಕರೆ ಮೊಗಣ್ಣೇಗೌಡರ ಹೆಸರಿನಲ್ಲಿ ಇತ್ತು ಎಂದರೆ ಸರಿ.

14. ವಾದಿಗೆ ಸದರಿ ಜಮೀನು ಎಂ.ಆರ್.ನಂ.10/1994-95 ರಂತೆ ಖಾತೆ ಆಗಿದೆ ಎಂದರೆ ಸರಿ.

15. ನೀವು ನಿಮ್ಮ ತಕರಾರಿನಲ್ಲಿ ಶಿವಣ್ಣೇಗೌಡ ಹಾಗೂ ಬೋರೇಗೌಡ ತಲಾ 1 ಎಕರೆ ಹಾಗೂ ಜವರೇಗೌಡರ ಮಗ ಮೊಗಣ್ಣೇಗೌಡ 2 ಎಕರೆ ಸ್ವಾಧೀನದಲ್ಲಿದ್ದಾರೆ ಎಂದು ಬರೆಸಿದ್ದೀರಾ ಎಂದರೆ ಸರಿ.

16. ವಾದಿ ನೀಡಿರುವ ಚಕ್ಕುಬಂದಿಯಲ್ಲಿ ಪೂರ್ವಕ್ಕೆ ಇರುವ ಜವರೇಗೌಡರ ಜಮೀನು ಸ.ನಂ.94/6 ರ ಜಮೀನು ಎಂದರೆ, ಸರಿಯಲ್ಲ. ಪೂರ್ವಕ್ಕೆ: ರುಕ್ಮಣಮ್ಮನವರ 94/12 ಪಿ1 ರಲ್ಲಿ 10 ಗುಂಟೆ ಜಮೀನು ಇದೆ. ಆ ಬಗ್ಗೆ ದಾಖಲೆ ಆರ್.ಟಿ.ಸಿ ಕೊಟ್ಟಿದ್ದೇವೆ.

17. ಸ.ನಂ.94/6 ಯಾರಿಗೆ ಸೇರಿದೆ ಎಂದರೆ ಅದರ ಬಗ್ಗೆ ನನಗೆ ಮಾಹಿತಿ ಗೊತ್ತಿಲ್ಲ.

18. ಸ.ನಂ.94/11 ಪಿ1 ರಲ್ಲಿರುವ ಒಟ್ಟು 4 ಎಕರೆಯಲ್ಲಿ ಯಾವುದಾದರೂ ವಿಸ್ತೀರ್ಣದಲ್ಲಿ ನೀವು ಸ್ವಾಧೀನದಲ್ಲಿ ಇದ್ದೀರಾ ಎಂದರೆ, ನಾನು ಇಲ್ಲ, ಬೋರೇಗೌಡ 1 ಎಕರೆ ಹಾಗು ಶಿವೇಗೌಡರು 1 ಎಕರೆ ಇದ್ದಾರೆ.

19. ಬೋರೇಗೌಡರು ಸ್ವಾಧೀನದಲ್ಲಿ ಇರುವ 1 ಎಕರೆ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ: ಶಿವೇಗೌಡರ ಜಮೀನು, ಪಶ್ಚಿಮಕ್ಕೆ: ಸಣ್ಣೇಗೌಡರ ಜಮೀನು, ಉತ್ತರಕ್ಕೆ: ತಮ್ಮೇಗೌಡ, ಅಣ್ಣಾಜಿಗೌಡ ರವರ ಜಮೀನು ಹಾಗೂ ದಕ್ಷಿಣಕ್ಕೆ: ಹಾರಂಗಿ ನಾಲೆ.

20. ಶಿವೇಗೌಡರು ಸ್ವಾಧೀನದಲ್ಲಿ ಇರುವ 1 ಎಕರೆ ಚಕ್ಕುಬಂದಿ ಗೊತ್ತು. ಪೂರ್ವಕ್ಕೆ: ರುಕ್ಮಿಣಮ್ಮನವರ 2 ಎಕರೆ ಜಮೀನು, ಪಶ್ಚಿಮಕ್ಕೆ: ಬೋರೇಗೌಡರ 1 ಎಕರೆ ಜಮೀನು, ಉತ್ತರಕ್ಕೆ: ತಮ್ಮೇಗೌಡ, ಅಣ್ಣಾಜಿಗೌಡ ರವರ ಜಮೀನು ಹಾಗೂ ದಕ್ಷಿಣಕ್ಕೆ: ಹಾರಂಗಿ ನಾಲೆ. ಸದರಿ ಪೂರ್ವಕ್ಕೆ ಇರುವ 2 ಎಕರೆ ಜಮೀನನ್ನು ರುಕ್ಮಿಣಮ್ಮ ನವರು ಸ್ವಾಧೀನ ಹೊಂದಿ ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ 2 ಎಕರೆ ಜಮೀನಿನಲ್ಲಿ ನಿಮಗೆ, ಬೋರೇಗೌಡರಿಗೆ, ಶಿವೇಗೌಡರಿಗೆ, ಸಣ್ಣತಾಯಮ್ಮ, ರತ್ನಮ್ಮ, ದಿಲೀಪ, ಶಿವಮ್ಮ ಹಾಗೂ ಚೈತ್ರಾ ರವರಿಗೆ ಯಾವುದೇ ಹಕ್ಕು ಸ್ವಾಧೀನ ಹಾಗೂ ಮಾಲೀಕತ್ವ ಇಲ್ಲ ಎಂದರೆ ಸರಿ.

21. ಸ.ನಂ.94/11 ಪಿ1 ನ್ನು ಯಾವಾಗಾದರೂ ಸರ್ವೇ ಮಾಡಿಸಿದ್ದೀರಾ ಎಂದರೆ, ಅದು ಸಾಗುವಳಿ ಜಮೀನು ಹಾಗಾಗಿ ಸರ್ವೇ ಮಾಡಿಸಲು ಬರುವುದಿಲ್ಲ. ಆ ಕಾರಣಕ್ಕೆ ಸದರಿ 4 ಎಕರೆಯಲ್ಲಿ ಯಾರು ಎಷ್ಟು ಎಕರೆ ಹಾಗೂ ಯಾವ ಚಕ್ಕುಬಂದಿಯಲ್ಲಿ ಇದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದರೆ, ಸರಿ.

22. ನೀವು, 1 ರಿಂದ 6 ಹಾಗೂ 8 ನೇ ಪ್ರತಿವಾದಿಯರು ಅನ್ಯೋನ್ಯವಾಗಿದ್ದೀರಾ ಎಂದರೆ ಸರಿ. ಆ ಕಾರಣಕ್ಕೆ ಅವರಿಗೆ ಅನುಕೂಲವಾಗಲಿ ಎಂದು ವಾದಿ ರುಕ್ಮಿಣಮ್ಮ ದಾವಾ ಸ್ವತ್ತಿಗೆ ತಪ್ಪು ಚಕ್ಕುಬಂದಿ ನೀಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

23. ದಾವಾ ಜಮೀನಿನ ಪಶ್ಚಿಮಕ್ಕೆ ಕಾಳಮ್ಮ ನವರ ಜಮೀನು ಎಂದರೆ ಸರಿಯಲ್ಲ, ಶಿವೇಗೌಡರ ಜಮೀನು. ಉತ್ತರಕ್ಕೆ ಬೋರೇಗೌಡರ ಜಮೀನು ಎಂದರೆ ಮಹಾದೇವ, ಅಣ್ಣಾಜೀಗೌಡ ರವರ ಜಮೀನು. ದಕ್ಷಿಣಕ್ಕೆಃ ಹಾರಂಗಿ ನಾಲೆ ಇದೆ.

24. ವಾದಿ ದಕ್ಷಿಣಕ್ಕೆ ಹೊರತುಪಡಿಸಿ ಬೇರೆ ದಿಕ್ಕಿನ ಚಕ್ಕುಬಂದಿ ತಪ್ಪು ನೀಡಿದ್ದಾರೆ ಎಂದು ನುಡಿಯುತ್ತಾರೆ.

25. ಯಾವ ದಾಖಲಾತಿ ಆಧಾರದ ಮೇಲೆ ಸದರಿ ಚಕ್ಕುಬಂದಿ ಹೇಳಿದ್ದೀರಾ ಎಂದರೆ, ನಾವು ಸ್ವಾಧೀನ ಹಾಗೂ ಅನುಭವದಲ್ಲಿರುವ ಆಧಾರದ ಮೇಲೆ ಹೇಳುತ್ತಿದ್ದೇನೆ.

26. ಸ.ನಂ.94/11 ಪಿ1 ರಲ್ಲಿ ನೀವು ಸ್ವಾಧೀನದಲ್ಲಿಲ್ಲದ ಕಾರಣ ನಿಮಗೆ ಸರಿಯಾದ ಚಕ್ಕುಬಂದಿ ಗೊತ್ತಿಲ್ಲ ಎಂದರೆ ಸರಿಯಲ್ಲ, ನಾವು ಪಕ್ಕದಲ್ಲಿ ಸ.ನಂ.94/12 ಪಿ1 ರಲ್ಲಿ 1 ಎಕರೆ 10 ಗುಂಟೆಯಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವೆ.

27. ನನ್ನ ಜಮೀನಿನ ಪಕ್ಕ ಪಶ್ಚಿಮ ದಿಕ್ಕಿಗೆ ರುಕ್ಮಿಣಮ್ಮನವರ ಸ.ನಂ.94/12 ಪಿ1 ರಲ್ಲಿ 10 ಗುಂಟೆ ಇದೆ.

28. ನಮ್ಮ ತಕರಾರು ಬರೆಯಲು ವಕೀಲರಿಗೆ ಮಾಹಿತಿಯನ್ನು 2 ನೇ ಪ್ರತಿವಾದಿ ಶಿವೇಗೌಡರವರು ಕೊಟ್ಟಿದ್ದಾರೆ.

29. ರುಕ್ಮಿಣಮ್ಮ, ಮೊಗಣ್ಣೇಗೌಡ ಹಾಗೂ ಅವರ ಅಳಿಯ ಪರಮೇಶ ರವರ ಮೇಲೆ ಮಾನ್ಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರತಿವಾದಿಗಳು ದಾವೆ ಹಾಕಿದ್ದಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಪಿರಿಯಾಪಟ್ಟಣ